ಇ) ಈ ವಿಮಾನ ನಿಲ್ದಾಣವನ್ನು ರಾಜ್ಯ ಸರ್ಕಾರವೇ ಅಭಿವೃದ್ಧಿಪಡಿಸಲು ವಾಯುಯಾನ ಮಂತ್ರಾಲಯವು ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

ದಿನಾಂಕ. 7.8.97ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ವಿರಾಜಪೇಟೆ ನಗರಕ್ಕೆ ಕುಡಿಯುವ ನೀರಿನ ಯೋಜನೆ

1851 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96, 1996-97ನೇ ಸಾಲಿನಲ್ಲಿ ಕುಡಿಯುವ ನೀರಿಗಾಗಿ ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಂಡಿದೆ, ಅದಕ್ಕಾಗಿ ಈವರೆಗೆ ಆಗಿರುವ ವೆಚ್ಚವೆಷ್ಟು?*

ಆ) *ವಿರಾಜಪೇಟೆ ನಗರಕ್ಕೆ ಬೀತ್ರಿಯ ಬಳಿ ಇರುವ ಕಾವೇರಿ ನೀರನ್ನು ಒದಗಿಸುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ?*

ಇ) *ಹಾಗಿದ್ದಲ್ಲಿ ಸರ್ಕಾರವು ಈ ಯೋಜನೆಗೆ ಈ ಸಾಲಿನಲ್ಲಿ ಎಷ್ಟು ಹಣ ಮೀಸಲಿಟ್ಟಿದೆ ಮತ್ತು ಈ ಯೋಜನೆ ಪೂರ್ಣಗೊಳಿಸಲು ಸರ್ಕಾರವು ಏನು ಕ್ರಮಕೈಗೊಂಡಿದೆ.*

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಕುಡಿಯುವ ನೀರಿಗಾಗಿ ಕೊಳವೆ ನೀರು ಸರಬರಾಜು, ಅಭಾವ ಪರಿಹಾರ, ನಗರ ನೀರು ಸರಬರಾಜು ಯೋಜನೆಗಳಿಗಾಗಿ ಆದ ವೆಚ್ಚ 95-96ನೇ ಸಾಲಿನಲ್ಲಿ ರೂ. 4222.45 ಲಕ್ಷ ರೂ.ಗಳು ಹಾಗೂ 96-97ನೇ ಸಾಲಿನಲ್ಲಿ ಸುಮಾರು 5216.87 ಲಕ್ಷ ರೂ.ಗಳು ವೆಚ್ಚವಾಗಿದೆ.

ಆ) ವಿರಾಜಪೇಟೆ ನಗರಕ್ಕೆ ನೀರನ್ನು ಒದಗಿಸುವ ಯೋಜನೆಗೆ ಅಂದಾಜು ಪಟ್ಟಿಯನ್ನು 195.00ರೂ. ಲಕ್ಷಗಳಿಗೆ ತಯಾರಿಸಲಾಗಿದೆ. ಅಂದಾಜು ಪಟ್ಟಿಯನ್ನು ತಾಂತ್ರಿಕ ಪರಿಶೀಲನೆಯ ಹಂತದಲ್ಲಿದ್ದು ನಂತರ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗುವುದು.

ಇ) ಈ ಯೋಜನೆಯು ಮಂಜೂರಾಗಿಲ್ಲವಿರುವುದರಿಂದ,1997-98ನೇ ಆಯವ್ಯಯದಲ್ಲಿ ಯಾವ ಹಣವನ್ನು ಮುಡುಪಾಗಿಟ್ಟಿಲ್ಲ, ಸರ್ಕಾರದಿಂದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಕ್ರಮಕೈಗೊಳ್ಳಲಾಗುವುದು.

ಕಬ್ಬು ಬೆಳೆಗಾರರಿಗೆ ಪರಿಹಾರ

1852 - ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96, 1996-97ನೇ ಸಾಲಿನಲ್ಲಿ ಕಬ್ಬು ಬೆಳೆಗಾರರಿಗೆ ಸರ್ಕಾರವು ಎಷ್ಟು ಹಣವನ್ನು ಪರಿಹಾರವಾಗಿ ನೀಡಿದೆ, (ಅದರ ವಿವರ ನೀಡುವುದು)*

ಆ) ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಎಷ್ಟು ಹೊಸ ಸಕ್ಕರೆ ಕಾರ್ಖಾನೆ ತೆಗೆಯಲು ರಾಜ್ಯ: ಕೇಂದ್ರ ಸರ್ಕಾರಗಳು ಪರವಾನಿಗೆ ನೀಡಿದೆ, ಅವುಗಳು ಯಾವುದು ಅವುಗಳ ವಿವರ ನೀಡುವುದು?

ೇ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :

ಅ) ಇಲ್ಲ.

ಆ) ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೆಹಲಿವರೆವಿಗೆ 33 ಹೊಸ ಸಕ್ಕರೆ ಖಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಪರವಾನಿಗೆ ನೀಡಿದೆ. ಅವುಗಳ ವಿವರವನ್ನು ನುಬಂಧದಲ್ಲಿ ನೀಡಲಾಗಿದೆ.

ಅನುಬಂಧ - ಆ

ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ಪಡೆದಿರುವ ಸಕ್ಕರೆ ಕಾರ್ಖಾನೆಗಳ ಜಿಲ್ಲಾವಾರು ವಿವರ

ಸಂ.	ಸಕ್ಕರೆ ಕಾರ್ಖಾನೆಯ ಹೆಸರು	ಸ್ಥಳ	ಅನುಮತಿ ಪತ್ರದ ಸಂಖ್ಯೆ ಮತ್ತು ದಿನಾಂಕ
1	2	3	4
)	**ಬೆಂಗಳೂರು ಗ್ರಾಮಾಂತರ ಜಿಲ್ಲೆ :**		
ೂ	ಎಸ್.ಪಿ.ಆರ್. ಶುಗರ್ಸ್	ಕಂಚುಗಾರನಹಳ್ಳಿ ರಾಮನಗರ ತಾ.	ಎಲ್ಐ:392:1996 27-9-96
	ಬೆಳಗಾಂ ಜಿಲ್ಲೆ :		
	ಸೋಮೇಶ್ವರ ಸ.ಸ.ಕಾ.	ಬೈಲಹೊಂಗಲ	ಎಲ್ಐ: 73: 1996 4-3-96
	ಶಶಿಕಾಂತ ಸಿಡ್ನಾಳ್ ಶುಗರ್ಸ್	ಮನೋಲಿ, ಸವದತ್ತಿ ತಾ.	ಎಲ್ಐ : 74:1996 4-3-96
	ಶಿವಶಕ್ತಿ ಶುಗರ್ಸ್	ಸವದತ್ತಿ ರಾಯಬಾಗ್ ತಾ.	ಎಲ್ಐ:193 :1996 3-7-96
	ಅಥಣಿ ಫಾರ್ಮರ್ಸ್ ಶುಗರ್ಸ್ ಫ್ಯಾಕ್ಟರಿ	ಜಾಂಬಗಿ, ಅಥಣಿ ತಾ	ಎಲ್ಐ:193:1996 3-7-96
	ಶಿರಗುಪ್ಪ ಶುಗರ್ಸ್	ಐಗಳಿ, ಅಥಣಿ ತಾ:	ಎಲ್ಐ:196:1996 3-7-96

1	2	3	4
7)	ವಿಶ್ವನಾಥ ಶುಗರ್ಸ್	ಬೆಲ್ಲದ ಬಾಗೇವಾಡಿ ಹುಕ್ಕೇರಿ ತಾ:	ಎಲ್‌ಐ:271:1996 25-7-96
8)	ಧನಲಕ್ಷ್ಮಿ ಸ.ಸ.ಕಾ.(ನಿ)	ಖಾನ್‌ಪೇಟೆ, ರಾಮದುರ್ಗ ತಾ.	ಎಲ್‌ಐ:467:1996 1-11-96
9)	ಭಾಗ್ಯ ಶ್ರೀ ಲಗಮವ್ವ ಶುಗರ್ಸ್	ಅಲಗವಾಡಿ ತಾ ರಾಯಬಾಗ್ ತಾ.	ಎಲ್‌ಐ:10:1997 28-1-97
ಇ)	**ಬಿಜಾಪುರ ಜಿಲ್ಲೆ :**		
10)	ಜೆಮ್ ಶುಗರ್ಸ್	ಕುಂದರ್ಗಿ, ಬೀಳಗಿ ತಾ.	ಎಲ್‌ಐ:145:1996 28-5-96
11)	ಪ್ರಭುಲಿಂಗೇಶ್ವರ ಶುಗರ್ಸ್ ಲಿ.,	ಸಿದ್ಧಾಪುರ ಜಮಖಂಡಿ ತಾ.	ಎಲ್‌ಐ:146:1996 28-5-96
12)	ಇಂಡಿಯನ್ ಕೇನ್ ಪವರ್ ಲಿ	ಕೊಲ್ಲಾರ್ ಬಸವನಬಾಗೇವಾಡಿ ತಾ.	ಎಲ್‌ಐ:194:1996: 3-7-96
13)	ಮಸೀಲಿ ಶುಗರ್ಸ್	ಯಲಗೂರು ಮುದ್ದೇಬಿಹಾಳ್	ಎಲ್‌ಐ:195:1996 23-7-96
ಈ)	**ಬಳ್ಳಾರಿ ಜಿಲ್ಲೆ :**		
14)	ಶ್ಯಾಮನೂರು ಶುಗರ್ಸ್ ಲಿ.,	ದುಗ್ಗಾವತಿ ಹರಪನಹಳ್ಳಿ ತಾ:	ಎಲ್‌ಐ: 179 : 199 28-6-96
ಉ)	**ಧಾರವಾಡ ಜಿಲ್ಲೆ :**		
15)	ನರಗುಂದ ಸ.ಸ.ಕಾ.	ಕೊನ್ನೂರು ನರಗುಂದ ತಾ.	ಎಲ್‌ಐ: 327:1996 8-8-96
16)	ಮೃಡಗಿರಿ ಸ.ಸ.ಕಾ.	ಗಂಗಾಪುರ, ಮುಂಡರಗಿ ತಾ.	ಎಲ್‌ಐ: 2: (1997) 27-1-97
17)	ಬಸವೇಶ್ವರ ಸ.ಸ.ಕಾ.	ಕಿರಿಗೇರಿ ಹಿರೇಕೆರೂರು ತಾ.	ಎಲ್‌ಐ:3(1997) 27-1-97

1	2	3	4
ಊ) ಗುಲ್ಬರ್ಗಾ ಜಿಲ್ಲೆ.			
18)	ಚಿಂಚೋಳಿ ಶುಗರ್ಸ್ ಲಿ.,	ಚಿಂಚೋಳಿ	ಎಲ್‌ಐ:861(1996) 15-3-96
ಋ) ಹಾಸನಜಿಲ್ಲೆ .			
19)	ಚಾಮುಂಡೇಶ್ವರಿ ಶುಗರ್ಸ್ ಲಿ.,	ಗಂಗೂರು, ದೊಡ್ಡ-ಬ್ಯಾಗತಹಳ್ಳಿ	ಎಲ್‌ಐ: 296(1996) 31-7-96
ೠ) ಉತ್ತರ ಕನ್ನಡ ಜಿಲ್ಲೆ.			
20)	ವೇಸ್ಟ್ ಕೋಸ್ಟ್ ಪೇಪರ್ ಮಿಲ್ಸ್	ದಾಂಡೇಲಿ ಹಳಿಯಾಳ ತಾ :	ಎಲ್‌ಐ: 141:1996 27-5-96
ಎ) ಮಂಡ್ಯ ಜಿಲ್ಲೆ			
21)	ಪ್ರೇಮ್ ಶುಗರ್ಸ್ ಮತ್ತು ಕೆಮಿಕಲ್ಸ್ ಕಾರ್ಪೋರೇಷನ್ ಲಿ.,	ತಿಮ್ಮಾಪುರ, ನಾಗಮಂಗಲ ತಾ.	ಎಲ್‌ಐ: 75:1996 4-3-96
22)	ಇಂಡಿಯಾ ಸಿಮೆಂಟ್ಸ್ ಲಿ.	ಮಲ್ಲೇನಹಳ್ಳಿ ಕೆ.ಆರ್.ಪೇಟೆ ತಾ.	ಎಲ್‌ಐ: 70:1996 4-3-96
23)	ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್	ಬೆಳಗೊಳ ಶ್ರೀರಂಗ-ಪಟ್ಟಣ ತಾ.	ಎಲ್‌ಐ: 69:1996 4-3-96
ಏ) ಮೈಸೂರು ಜಿಲ್ಲೆ			
24)	ಎಂ.ಮತ್ತು ಸಿ ಎಕ್ಸ್‌ಪೋರ್ಟ್ ಇಂಡಸ್ಟ್ರೀಸ್ ಲಿ.,	ಗದ್ದಿಗೆಹಳ್ಳಿ, ಹುಣಸೂರು ತಾ.	ಎಲ್‌ಐ: 93:1997 8-4-97
25)	ಮೈಸೂರು ಪ್ರೊಟ್ ಪ್ರಾಡಕ್ಟ್ಸ್	ಬನ್ನೂರು, ಟಿ. ನರಸೀಪುರ ತಾ.	ಎಲ್‌ಐ: 105:1997 17-4-97
26)	ರಾಜ ಶುಗರ್ಸ್ ಮಿಲ್ಸ್ ಪ್ರೈಲಿ.,	ಚಂದಕವಾಡಿ, ಚಾಮರಾಜನಗರ ತಾ.	ಎಲ್‌ಐ: 169: 1997 7-7-97
27)	ಬಿಳಿಗಿರಿ ಶುಗರ್ಸ್ ಮತ್ತು	ಹನೂರು, ಪುಲಸುಬೋರೇ ಗುಡ್ಡ, ಕೊಳ್ಳೇಗಾಲ ತಾ.	ಎಲ್‌ಐ:91:1997 8-4-97

1	2	3	4
28)	ಬರೂಕ್ ಪವರ್ ಕಾರ್ಪೋರೇಷನ್	ತೆರಕನಾಂಬಿ, ಗುಂಡ್ಲುಪೇಟೆ ತಾ.	ಎಲ್: ದಿನಾಂಕ.
29)	ಅಭಿರಾಮ ಶುಗರ್ಸ್	ವರುಣ, ಮೈಸೂರು ತಾ.	ಎಲ್ಐ:172:1997 7-7-97
30)	ಸಂಗೀತ ಶುಗರ್ಸ್	ಮಾದಾಪುರ, ಚಾಮರಾಜ-ನಗರ ತಾ.	ಎಲ್ಐ:
ಐ) ಶಿವಮೊಗ್ಗ ಜಿಲ್ಲೆ			
31)	ಮಲ್ಲಾಡ್ ಶುಗರ್ಸ್ ಕಂಪನಿ	ಅರಸನಘಟ್ಟ ಭದ್ರಾವತಿ ತಾ.	ಎಲ್ಐ:322:1996 20-8-96
32)	ಆಂಜನೇಯ ಶುಗರ್ಸ್	ಕುಂದೂರು ಹೊನ್ನಾಳಿ ತಾ.	ಎಲ್ಐ:163:1997 13-6-97
ಒ) ತುಮಕೂರು ಜಿಲ್ಲೆ			
33)	ಚಂದ್ರಪ್ರಕಾಶ ಶುಗರ್ಸ್ ಲಿ.,	ಹೇರೂರು, ಗುಬ್ಬಿ ತಾ.	ಎಲ್ಐ: 182:1996 28-6-96.

ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಮಾಡಿದ ವೆಚ್ಚ

1853 - ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95, 1995-96,1996-97ರ ಸಾಲಿನಲ್ಲಿ ಅಲ್ಪಸಂಖ್ಯಾತರ ಸಲುವಾಗಿ ಎಷ್ಟು ಹಣವನ್ನು ವೆಚ್ಚ ಮಾಡಲು ನಿಗದಿಪಡಿಸಲಾಗಿತ್ತು. ಮತ್ತು ನಿಗದಿಪಡಿಸಿದ ಹಣದಲ್ಲಿ ಎಷ್ಟು ಹಣ ಮಾಡಲಾಗಿದೆ ? (ಜಿಲ್ಲಾವಾರು ಅಂಕಿ ಅಂಶ ನೀಡುವುದು)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಕರ್ನಾಟಕ ಸರ್ಕಾರದಿಂದ 1994-95, 1995-96, 1996-97ನೇ ಸಾಲಿನಲ್ಲಿ ನಿಗದಿಪಡಿಸಿದ ಮೊತ್ತ ಹಾಗೂ ಬಿಡುಗಡೆಯಾದ ಮೊತ್ತ ಹಾಗೂ ಖರ್ಚಾದ ವಿವರಗಳು ಈ ಕೆಳಗಿನಂತಿದೆ. (ಜಿಲ್ಲಾವಾರು ಅಂಕಿ ಅಂಶವನ್ನು ಅನುಬಂಧ-1, 2 ಮತ್ತು 3 ರಲ್ಲಿ ನೀಡಲಾಗಿದೆ)